**ಚಾಸಾ-4 ಪ್ರಾಸಾ-1**

# 3ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

## ಸಿಸಿ.2222/2020

**ಚಾಸಾ- 4 ಪ್ರಾಸಾ- 1**

| | |
|---|---|
| **ಸಾಕ್ಷಿದಾರರ ಹೆಸರು** | ಮಹಾದೇವಯ್ಯ |
| **ತಂದೆಯ ಹೆಸರು** | ಲೇಟ್.ಸಿದ್ದ ಬಸವಯ್ಯ |
| **ವಯಸ್ಸು** | 62 ವರ್ಷ |
| **ಉದ್ಯೋಗ** | ನಿವೃತ್ತ ಎಎಸ್ ಐ, |
| **ವಾಸ** | ಸುಂಕದಕಟ್ಟೆ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 29 .05.2024. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2018 ರಿಂದ ಜುಲೈ 2022 ರವರೆಗೆ ಆರ್ .ಎಂ.ಸಿ. ಯಾರ್ಡ್ ಪೊಲೀಸ್ ಠಾಣೆಯಲ್ಲಿ ಎ.ಎಸ್ ಐ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.07.06.2019 ರಂದು ಮಧಾಹ್ಯ 02.45 ಗಂಟೆಗೆ ನಾನು ಪ್ರಭಾರದಲ್ಲಿದ್ದಾಗ ಸುರೇಶ್ ಬಾಬು ರವರು ಠಾಣೆಗೆ ಹಾಜರಾಗಿ ನೀಡಿದ ಗಣಕೀಕೃತ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ಸಂಖ್ಯೆಃ115/2019 ರಂತೆ ಪ್ರಕರಣ ದಾಖಲು ಮಾಡಿ ಪ್ರ.ವ.ವರದಿಯನ್ನು ದಾಖಲಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-5 ರವರಿಗೆ ನೀಡಿರುತ್ತೇನೆ.

ಈಗ ನೋಡುತ್ತಿರುವ ದಾಖಲೆ ನಾನು ಸ್ವೀಕರಿಸಿದ ದೂರು ಆಗಿದ್ದು, ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ದಾಖಲೆ ನಾನು ದಾಖಲಿಸಿದ ಪ್ರ.ವ.ವರದಿಯಾಗಿದ್ದು, ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

**ಚಾಸಾ-4 ಪ್ರಾಸಾ-1**

**<u>ಪಾಟೀ ಸವಾಲು : ಶ್ರೀ. ಜೆ.ಎ.ಬಿ . ವಕೀಲರಿಂದ ಆರೋಪಿ ಪರ</u>**

ದೂರು ಬಂದ ನಂತರ ನಾನು ಆರೋಪಿ ಎಷ್ಟು ಹಣ ಕಟ್ಟಿರುತ್ತಾರೆ ಎಂದು ಪಿಎಫ್ ಇಲಾಖೆಗೆ ವಿಚಾರಣೆ ಮಾಡಿಲ್ಲ. ದಿ.07.06.2019 ರಂದು ದೂರು ನೀಡಿರುತ್ತಾರೆ. 2019 ರಲ್ಲಿ ಕೋವೀಡ್ ಇತ್ತು ಎಂದರೆ ಸರಿ. ಪಿಎಫ್ ಇಲಾಖೆಯವರು ನೀಡಿದ ದೂರನ್ನು ವಿಚಾರಣೆ ಮಾಡದೇ ಸುಳ್ಳು ಪ್ರ.ವ.ವರದಿಯನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ದೂರು ನೀಡಿದ ದಿನವೇ ಪ್ರ.ವ.ವರದಿಯನ್ನು ದಾಖಲಿಸಿರುತ್ತೇನೆ. ನಾನು ಆರೋಪಿಯನ್ನು ಕರೆದು ವಿಚಾರಣೆ ಮಾಡಿಲ್ಲ. ಸುಳ್ಳು ಕೇಸು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

**<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)</u>**

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಎಮ್.ಎಮ್.ನ್ಯಾ.**
**ಬೆಂಗಳೂರು.**